**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಹುಕ್ಕೇರಿ**

CC No. 1679/2023
CW 9 / PW -4

ಹೆಸರು : ಪೃಥವಿರಾಜ ಜಯಪಾಲ ಸಕಲಕನವರ
ವಯಸ್ಸು : 17 ವರ್ಷ
ಉದ್ಯೋಗ : ವಿದ್ಯಾರ್ಥಿ
ವಾಸಸ್ಥಳ : ನಂದಗಾವ ತಾಃ ಅಥಣಿ

(ದಿನಾಂಕ 18-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ -**

**1.** ಮೃತ ಜಯಪಾಲ ನನ್ನ ತಂದೆ . ಜಯಶ್ರೀ ನನ್ನ ಅತ್ತೆ . ದಿನಾಂಕ **2-5-2023** ರಂದು ನಾನು , ನನ್ನ ತಂದೆ ಜಯಪಾಲ ಹಾಗೂ ನನ್ನ ಅಜ್ಜಿ ಹಾಗೂ ನನ್ನ ಅತ್ತೆ ಜಯಶ್ರಿ ಎಲ್ಲರೂ ಸೇರಿ ಬೆಳಗಾವಿಯ ಆಸ್ಪತ್ರೆಗೆ ಹೋಗಿ ಕಾರಿನಲ್ಲಿ ವಾಪಸ ಬರುತ್ತಿದ್ದಾಗ ಸಾಯಂಕಾಲ **5-00** ಗಂಟೆಗೆ ಹುಕ್ಕೇರಿ ಬೆಳಗಾವಿ ರಸ್ತೆಯಲ್ಲಿ ಮತ್ತೊಂದು ಜೀಪ ಗಾಡಿಗೆ ಡಿಕ್ಕಿ ಹೊಡೆದು ಅಪಘಾತ ಆಯಿತು. ನಾನು ಡ್ರೈವರ ಹಿಂಬದಿಯ ಸೀಟಿನಲ್ಲಿ ಮಧ್ಯದಲ್ಲಿ ಕುಳಿತಿದ್ದೆ . ನನ್ನ ಪಕ್ಕದಲ್ಲಿ ನನ್ನ ಅಜ್ಜಿ ಕುಳಿತಿದ್ದಳು . ಡೋರಿನ ಸೈಡ ನನ್ನ ಅತ್ತೆ ಕುಳಿತಿದ್ದಳು. ನನ್ನ ತಂದೆ ಡ್ರೈವರನ ಪಕ್ಕದ ಸೀಟಿನಲ್ಲಿ ಕುಳಿತಿದ್ದರು. ಆ ಗಾಡಿಯ ಡ್ರೈವರ ಕಿಸಮತ ಅಲಿ ಇದ್ದರು. ಎದುರುಗಡೆಯಿಂದ ಒಂದು ಜೀಪ ಬಂದು ಡಿಕ್ಕಿ ಹೊಡೆಯಿತು . ನಾನು ಅಪಘಾತ ಹೇಗೆ ಆಯಿತು ಎಂದು ನೋಡಲಿಲ್ಲ . ನಾನು ಆಗ ಮಲಗಿದ್ದೆ ಎಂದು ಹೇಳುತ್ತಾರೆ. ನಾವು ಬೆಳಗಾವಿ ಬಿಟ್ಟಾಗ **3-00** ಗಂಟೆ ಆಗಿತ್ತು .

**( ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ವಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ** ಸರಕಾರಿ ಸಹಾಯಕ ಅಭಿಯೋಜಕರಿಂದ -

**2.** ದಿನಾಂಕ **2-5-2023** ರಂದು ನನ್ನ ಅಜ್ಜಿಯನ್ನು ಬೆಳಗಾವಿ ಅಪೂರ್ವ ಆಸ್ಪತ್ರೆಯಲ್ಲಿ ತೋರಿಸಿಕೊಂಡು ವಾಪಸ ಮಾರುತಿ ಸ್ವಿಫ್ಟ ಕಾರಿನಲ್ಲಿ ಬರುತ್ತಿದ್ದಾಗ ಸಾಯಂಕಾಲ **5-00**

ಗಂಟೆ ಸುಮಾರಿಗೆ ಬೆಳಗಾವಿ ಹುಕ್ಕೇರಿ ರಸ್ತೆಯಲ್ಲಿ ಬಸವರಾಜ ಕೋಟ್ಯಾಳ ಇವರ ಮನೆಯ ಹತ್ತಿರ ಎದುರುಗಡೆಯಿಂದ ಒಂದು ಮಹೀಂದ್ರಾ ಎಕ್ಸ ಇ ವಿ ಕಾರ ಅತಿ ವೇಗವಾಗಿ ಹಾಗೂ ನಿರ್ಲಕ್ಷತನದಿಂದ ಬಂದು ತನ್ನ ಮುಂದೆ ಹೋಗುತ್ತಿದ್ದ ವಾಹವನ್ನು ಓವರಟೇಕ ಮಾಡಿಕೊಂಡು ನಮ್ಮ ಕಾರಿಗೆ ಹಾಯಿಸಿ ಅಪಘಾತ ಪಡಿಸಿತು ಎಂದರೆ ನಿಜ. ಆ ಸಮುದಲ್ಲಿ ನಾವು ಕಾರಿನಲ್ಲಿ ಸಿಕ್ಕಿ ಹಾಕಿಕೊಂಡೆವು, ರಸ್ತೆಯಲ್ಲಿ ಹೋಗುತ್ತಿದ್ದ ಜನ ನಮ್ಮನ್ನು ಹೊರಗಡೆ ತೆಗೆದರು ಎಂದರೆ ನಿಜ.

3. ನನ್ನ ಅಜ್ಜಿಗೆ ಅಪಘಾತದಲ್ಲಿ ಎಡಗೈ ಮತ್ತು ಎಡಗಾಲಿಗೆ ಹಾಗೂ ನನಗೆ ಎಡಗೈ ಮತ್ತು ಎಡಗಾಲಿಗೆ ಹಾಗೂ ಕಾರ ಡ್ರೈವರನಿಗೆ ಎಡಗೈ ಮತು ಎಡಭುಜಕ್ಕೆ ಮತ್ತು ಎಡಗಾಲಿಗೆ ಪೆಟ್ಟಾಗಿತ್ತು ಎಂದರೆ ನಿಜ. ನನ್ನ ತಂದೆ ಜಯಪಾಲ ಈತನ ತಲೆ , ಎದೆ ಕೈಕಾಲುಗಳಿಗೆ ಪೆಟ್ಟಾಗಿ ಅಲ್ಲೇ ತೀರಿಕೊಂಡ ಎಂದರೆ ನಿಜ. ನನ್ನ ಅತ್ತೆ ಜಯಶ್ರೀ ಕಾಮಗೌಡರ ಇವಳಿಗೆ ತಲೆಗೆ ಪೆಟ್ಟಾಗಿ ಅಲ್ಲೇ ತೀರಿಕೊಂಡಳು ಎಂದರೆ ನಿಜ.

4. ನಮ್ಮನ್ನು 108 ಅಂಬ್ಯೂಲನ್ಸನಲ್ಲಿ ಹುಕ್ಕೇರಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿದರು ಎಂದರೆ ನಿಜ. ನಂತರ ನಾವು ಹೆಚ್ಚಿನ ಚಿಕಿತ್ಸೆಯನ್ನು ಸಿದ್ದಾಂತ ಆಸ್ಪತ್ರೆ ಅಥಣಿಯಲ್ಲಿ ಪಡದೆವು ಎಂದರೆ ನಿಜ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ -**

ಅಪಘಾತ ಆದಾಗ ನಾನು ನಿದ್ರೆ ಗುಂಗಿನಲ್ಲಿ ಇದ್ದೆ , ನಾನು ಏನೂ ಕಣ್ಣಾರೆ ನೋಡಿಲ್ಲ ಎಂದರೆ ನಿಜ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಹುಕ್ಕೇರಿ**

CC No. 1679/2023
CW 8 / PW -3

ಹೆಸರು : ಅಕ್ಕಾತಾಯಿ ಬಾಬಣ್ಣಾ ಸಕಲಕನವರ
ವಯಸ್ಸು : 58 ವರ್ಷ
ಉದ್ಯೋಗ : ಒಕ್ಕಲುತನ
ವಾಸಸ್ಥಳ : ನಂದಗಾವ ತಾಃ ಅಥಣಿ

(ದಿನಾಂಕ 18-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ -**

1. ಮೃತ ಜಯಪಾಲ ನನ್ನ ಮಗ. ಜಯಶ್ರೀ ನನ್ನ ಮೈದುನನ ಮಗಳು. ದಿನಾಂಕ 2-5-2023 ರಂದು ನಾನು , ನನ್ನ ಮಗ ಜಯಪಾಲ ಹಾಗೂ ನನ್ನ ಮೊಮ್ಮಗ ಪೃಥವಿರಾಜ ಹಾಗೂ ನನ್ನ ಮೈದುನನ ಮಗಳು ಜಯಶ್ರಿ ಎಲ್ಲರೂ ಸೇರಿ ಬೆಳಗಾವಿಯ ಆಸ್ಪತ್ರೆಗೆ ಹೋಗಿ ಕಾರಿನಲ್ಲಿ ವಾಪಸ ಬರುತ್ತಿದ್ದಾಗ ಸಾಯಂಕಾಲ 5-00 ಗಂಟೆಗೆ ಹುಕ್ಕೇರಿ ಬೆಳಗಾವಿ ರಸ್ತೆಯಲ್ಲಿ ಮತ್ತೊಂದು ಜೀಪ ಗಾಡಿಗೆ ಡಿಕ್ಕಿ ಹೊಡೆದು ಅಪಘಾತ ಆಯಿತು. ನಾನು ಡ್ರೈವರ ಹಿಂಬದಿಯ ಸೀಟಿನಲ್ಲಿ ಕುಳಿತಿದ್ದೆ . ನನ್ನ ಪಕ್ಕದಲ್ಲಿ ನನ್ನ ಮೊಮ್ಮಗ ಕುಳಿತಿದ್ದ . ಅವನ ಪಕ್ಕ ಡೋರಿನ ಸೈಡ ನನ್ನ ಮೈದುನನ ಮಗಳು ಜಯಶ್ರಿ ಕುಳಿತಿದ್ದಳು. ನನ್ನ ಮಗ ಡ್ರೈವರನ ಪಕ್ಕದ ಸೀಟಿನಲ್ಲಿ ಕುಳಿತಿದ್ದ. ಆ ಗಾಡಿಯ ಡ್ರೈವರ ಕಿಸಮತ ಅಲಿ ಇದ್ದ. ಎದುರುಗಡೆಯಿಂದ ಒಂದು ಜೀಪ ಬಂದು ಡಿಕ್ಕಿ ಹೊಡೆಯಿತು . ನಾನು ಅಪಘಾತ ಹೇಗೆ ಆಯಿತು ಎಂದು ನೋಡಲಿಲ್ಲ . ನಾನು ಅರೆ ಪ್ರಜ್ಞಾವಸ್ಥೆಯಲ್ಲಿ ಇದ್ದೆ ಎಂದು ಹೇಳುತ್ತಾರೆ. ನಾವು ಬೆಳಗಾವಿ ಬಿಟ್ಟಾಗ 3-00 ಗಂಟೆ ಆಗಿತ್ತು .

**( ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ವಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ** ಸರಕಾರಿ ಸಹಾಯಕ ಅಭಿಯೋಜಕರಿಂದ -

2. ದಿನಾಂಕ 2-5-2023 ರಂದು ನನಗೆ ಬೆಳಗಾಳಿ ಅಪೂರ್ವ ಆಸ್ಪತ್ರೆಯಲ್ಲಿ ತೋರಿಸಿಕೊಂಡು ವಾಪಸ ಮಾರುತಿ ಸ್ವಿಫ್ಟ ಕಾರಿನಲ್ಲಿ ಬರುತ್ತಿದ್ದಾಗ ಸಾಯಂಕಾಲ 5-00 ಗಂಟೆ ಸುಮಾರಿಗೆ

ಬೆಳಗಾವಿ ಹುಕ್ಕೇರಿ ರಸ್ತೆಯಲ್ಲಿ ಬಸವರಾಜ ಕೋಟ್ಯಾಳ ಇವರ ಮನೆಯ ಹತ್ತಿರ ಎದುರುಗಡೆಯಿಂದ ಒಂದು ಮಹೀಂದ್ರಾ ಎಕ್ಸ ಇ ವಿ ಕಾರ ಅತಿ ವೇಗವಾಗಿ ಹಾಗೂ ನಿರ್ಲಕ್ಷತನದಿಂದ ಬಂದು ತನ್ನ ಮುಂದೆ ಹೋಗುತ್ತಿದ್ದ ವಾಹವನ್ನು ಓವರಟೇಕ ಮಾಡಿಕೊಂಡು ನಮ್ಮ ಕಾರಿಗೆ ಹಾಯಿಸಿ ಅಪಘಾತ ಪಡಿಸಿತು ಎಂದರೆ ನಿಜ. ಆ ಸಮುದಲ್ಲಿ ನಾವು ಕಾರಿನಲ್ಲಿ ಸಿಕ್ಕಿ ಹಾಕಿಕೊಂಡೆವು, ರಸ್ತೆಯಲ್ಲಿ ಹೋಗುತ್ತಿದ್ದ ಜನ ನಮ್ಮನ್ನು ಹೊರಗಡೆ ತೆಗೆದರು ಎಂದರೆ ನಿಜ.

ನನಗೆ ಅಪಘಾತದಲ್ಲಿ ಎಡಗೈ ಮತು ಎಡಗಾಲಿಗೆ ಹಾಗೂ ನನ್ನ ಮೊಮ್ಮಗ ಎಡಗೈ ಮತು ಎಡಗಾಲಿಗೆ ಹಾಗೂ ಕಾರ ಡ್ರೈವರನಿಗೆ ಎಡಗೈ ಮತು ಎಡಭುಜಕ್ಕೆ ಮತ್ತು ಎಡಗಾಲಿಗೆ ಪೆಟ್ಟಾಗಿತ್ತು ಎಂದರೆ ನಿಜ. ನನ್ನ ಮಗ ಜಯಪಾಲ ಈತನ ತಲೆ , ಎದೆ ಕೈಕಾಲುಗಳಿಗೆ ಪೆಟ್ಟಾಗಿ ಅಲ್ಲೇ ತೀರಿಕೊಂಡ ಎಂದರೆ ನಿಜ. ಮೈದುನನ ಮಗಳು ಜಯಶ್ರೀ ಕಾಮಗೌಡರ ಇವಳಿಗೆ ತಲೆಗೆ ಪೆಟ್ಟಾಗಿ ಅಲ್ಲೇ ತೀರಿಕೊಂಡಳು ಎಂದರೆ ನಿಜ. ನಮ್ಮನ್ನು 108 ಅಂಬ್ಯೂಲನ್ಸನಲ್ಲಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿದರು ಎಂದರೆ ನಿಜ. ನಂತರ ನಾವು ಹೆಚ್ಚಿನ ಚಿಕಿತ್ಸೆಯನ್ನು ಸಿದ್ದಾಂತ ಆಸ್ಪತ್ರೆ ಅಥಣಿಯಲ್ಲಿ ಪಡದೆವು ಎಂದರೆ ನಿಜ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ -**

ಅಪಘಾತ ಆದಾಗ ನನಗೆ ಪ್ರಜ್ಞೆ ತಪ್ಪಿತ್ತು , ನಾನು ಏನೂ ಕಣ್ಣಾರೆ ನೋಡಿಲ್ಲ ಎಂದರೆ ನಿಜ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**

**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಹುಕ್ಕೇರಿ</u>**

CC No. 1679/2023
CW 7 / PW -2

ಹೆಸರು : ಸುಕುಮಾರ ಭೀಮಪ್ಪಾ ಜಯಗೌಡಾ
ವಯಸ್ಸು : 55 ವರ್ಷ
ಉದ್ಯೋಗ : ಒಕ್ಕಲುತನ
ವಾಸಸ್ಥಳ : ನಂದಗಾವ ತಾಃ ಅಥಣಿ

(ದಿನಾಂಕ 18-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ -</u>**

1. ಚಾಸಾ-6 ನನಗೆ ಗೊತ್ತು. ಆತ ನನ್ನ ಸ್ನೇಹಿತ. ದಿನಾಂಕ 03-05-2023 ರಂದು ಹುಕ್ಕೇರಿ ಬೆಳಗಾವಿ ರಸ್ತೆಯಲ್ಲಿ ಪೋಲಿಸರು ನನ್ನನ್ನು ಮತ್ತು ಚಾಸಾ-6 ಇವರನ್ನು ಪಂಚನಾಮೆ ಮಾಡಲು ಕರೆಸಿದ್ದರು . ಅಲ್ಲಿ ಹುಕ್ಕೇರಿಯ ಸಮೀಪ 2-5-2023 ರಂದು ಬೆಳಿಗ್ಗೆ 7-00 ಗಂಟೆಗೆ ಜಯಪಾಲ ಈತನ ತಾಯಿ ಅಕ್ಕಾತಾಯಿ ಇವಳನ್ನು ಬೆಳಗಾವಿ ಅಪೋಲೊ ಆಸ್ಪತ್ರೆಗೆ ತೋರಿಸಿಕೊಂಡು ಸಂಜೆ 5-15 ಕ್ಕೆ ವಾಪಸ ಬರುತ್ತಿದ್ದಾಗ ಅಪಘಾತ ಆಗಿತ್ತು ಎಂದು ನಮಗೆ ಹೇಳಿ ಅಲ್ಲಿ ಮಾರುತಿ ಸ್ವಿಫ್ಟ ಕಾರ ಹಾಗೂ ಮಹೀಂದ್ರಾ ಎಕ್ಸ ಯು ವಿ ಕಾಗಳ ನಡುವೆ ಅಪಘಾತ ಆಗಿರುತ್ತದೆ. ಅಲ್ಲಿ ಪೋಲಿಸರು ನನ್ನನ್ನು ಮತ್ತು ಚಾಸಾ-6 ಇವರನ್ನು ಪಂಚರಾಗಿ ಹಾಜರ ಮಾಡಿಕೊಂಡು ಅಲ್ಲಿ ಮಾಡಿದ ಪಂಚನಾಮೆಗೆ ಸಾಕ್ಷಿಯಾಗಿ ಸಹಿ ಹಾಕಿಸಿಕೊಂಡರು. ಅಲ್ಲಿ ನಮ್ಮ ಫೋಟೊ ಮತ್ತು ಪಂಚನಾಮೆಯನ್ನು ಮಾಡಿದರು. ಅಪಘಾತದ ಜಾಗವನ್ನು ರವೀಂದ್ರ ಸಕಲಕನವರ ಇವರು ತೋರಿಸಿದರು.

2. ಸದರಿ ಪಂಚನಾಮೆ ಈಗ ನೋಡುತ್ತಿದ್ದು ಅದನ್ನು ನಿ.ಪಿ-6 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-6(ಬಿ) ಎಂದು ಗುರುತಿಸಲಾಯಿತು. ಅಂದು ಮಾಡಿದ ಕಚ್ಚಾ ನಕಾಶೆ ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ-7(ಬಿ) ಎಂದು ಗುರುತಿಸಲಾಯಿತು. ಅಲ್ಲಿ ತೆಗೆದ ಫೋಟೊ ಈಗಾಗಲೇ ನಿ.ಪಿ-8 ಎಂದು ಗುರುತಿಸಲಾಗಿದೆ .

3. ನಂತರ ಪೋಲಿಸರು ನಮ್ಮನ್ನು ಪೋಲಿಸ ಠಾಣೆಗೆ ಕರೆದುಕೊಡು ಬಂದರು. ಅಲ್ಲಿ ಅಪಘಾತಕ್ಕೀಡಾದ 2 ವಾಹನಗಳನ್ನು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಫೋಟೊ

ತೆಗೆದರು. ಅಂದು ಮಾಡಿದಂತಹ ವಾಹನ ತಡೆ ಪಂಚನಾಮೆ ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ-9 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ-9(ಬಿ) ಎಂದು ಗುರುತಿಸಲಾಯಿತು. ಅಪಘಾತಕ್ಕೀಡಾದ ವಾಹನಗಳ ಫೋಟೋ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿ.ಪಿ-10 ರಿಂದ 17 ಎಂದು ಗುರುತಿಸಲಾಗಿದೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ -**

ಈ ಪಂಚನಾಮೆ ಬರೆಯಲು ನಾನು ಮಾಹಿತಿ ಕೊಟ್ಟಿಲ್ಲ ಎಂದರೆ ನಿಜ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**